# ಅಭಿಜಾತ ಕನ್ನಡ


ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ
ದ್ವೈಮಾಸಿಕ ಸಂಶೋಧನಾ ಪತ್ರಿಕೆ

S.T.C. Arts and Commerce College
BANHATTI
587 311

# ABHIJATA KANNADA

Peer Reviewed Referred Journal ISSN : 2347-4017
ರೆಫರೀಡ್ ಜರ್ನಲ್

SSN-2347-4017- ಮೇ - ಜೂನ್ 2021 ಸಂಪುಟ-7 ಸಂಚಿಕೆ-3
May - June 2021 Vol-7 Issue-3



ಪ್ರಧಾನ ಸಂಪಾದಕರು
ಪ್ರೊ. ಎಸ್. ಎಂ. ಗಂಗಾಧರಯ್ಯ

*

## ಪರಿವಿಡಿ


೧. ಸಿದ್ಧನಂಜೇಶನ ಬಸವಶತಕ ಸಮೀಕ್ಷೆ
❖ ಪ್ರೊ. ಸಿ.ನಾಗಭೂಷಣ / ೧೦

೨. ಜಾಯಗೌಂಡನ 'ಕರ್ಣಾಟಕ ಕುವಲಯಾನಂದ' : ಒಂದು ಟಿಪ್ಪಣಿ
❖ ಪ್ರೊ. ಎಸ್.ಎಂ. ಗಂಗಾಧರಯ್ಯ / ೨೪

೩. ಬಳ್ಳಾರಿ ಪಾಳೆಯಗಾರರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು
❖ ಡಾ. ಎಚ್.ತಿಪ್ಪೇಸ್ವಾಮಿ / ೨೯

೪. ಪರ್ವ ಕಾದಂಬರಿ : ಪಿತೃ ಪ್ರಧಾನ ಸಾಮಾಜಿಕ ವ್ಯವಸ್ಥೆ
❖ ಡಾ. ಶೋಭಾ ನಾಯಕ / ೪೩

೫. ಆತ್ಮಕತೆಗಳ ಸ್ವರೂಪ ಮತ್ತು ಹಿನ್ನೆಲೆ
❖ ಡಾ. ಹಾ ಮ ನಾಗಾರ್ಜುನ / ೪೭

೬ ಕೆಂಭಾವಿ ಭೋಗಣ್ಣನ ಕಾಲ ವಿವೇಚನೆ
❖ ಡಾ. ರಾಮರೆಡ್ಡಿ ಎಸ್. ರಡ್ಡೇರ / ೫೫

೭ ಮುಕ್ತ್ಯಾಂಗನೆ ಮೋಳಿಗೆಯ ಮಹಾದೇವಿ : ಹಿನ್ನೆಲೆ ಮತ್ತು ವಚನಗಳು
❖ ಡಾ. ಸುಮಂಗಲಾ ಮೇಟಿ / ೬೨

೮. ಗಾಯಕನ ದೋಷಗಳು : ಮಾರ್ಗೀಯ ಚಿಂತನೆ
❖ ಡಾ. ಕೆ.ಎಂ. ರೋಹಿಣಿ / ೭೩

೯. ಧಾರ್ಮಿಕ ಸಮನ್ವಯತೆಯ ಕೇಂದ್ರಬಿಂದು - ಸಾವಳಗಿಯ ಶ್ರೀ ಶಿವಲಿಂಗೇಶ್ವರ ಮಠ
❖ ದೀಪಾ ಬ ಅಂಗಡಿ / ೭೮

೧೦. ವಚನ ಸಾಹಿತ್ಯ ಮತ್ತು ಶರಣರ ತತ್ವದರ್ಶನ





೧೧. ಸರ್ವಜ್ಞ ಕವಿ ಮತ್ತು ಸಾಮಾಜಿಕ ಪ್ರಜ್ಞೆ
❖ ಡಾ. ವನಜಾಕ್ಷಿ ಆರ್. ಹಳ್ಳಿಯವರ / ೯೯

೧೨. ಶಿವಾನುಭವ ಪತ್ರಿಕೆಯಲ್ಲಿ ಸಾಮಾಜಿಕ ಕಳಕಳಿ
❖ ಸುರೇಶ ಪಿ ನಡೋಣಿ / ೧೦೮

೧೩. ಕುವೆಂಪು ಕವಿತೆಗಳಲ್ಲಿ ಅನುಭಾವದ ನೆಲೆಗಳು
❖ ಮೌನೇಶ ಕಮ್ಮಾರ / ೧೧೬

೧೪. ಕನ್ನಡ ತಂತ್ರಾಂಶಗಳು : ಚರಿತ್ರೆ ಮತ್ತು ಸಮಕಾಲೀನತೆ
❖ ಡಾ. ಕೊಟ್ರಸ್ವಾಮಿ. ಎ.ಎಂ.ಎಂ /೧೨೬


S.T.C. Arts and Commerce College BANHATTI 587 311

S.T.C. Arts and Commerce College BANHATTI 587 311 ★

# ೧೨. ಶಿವಾನುಭವ ಪತ್ರಿಕೆಯಲ್ಲಿ ಸಾಮಾಜಿಕ ಕಳಕಳಿ

❖

ಸುರೇಶ ಪಿ ನಡೋಣಿ

ವಚನ ಸಾಹಿತ್ಯ ಪಿತಾಮಹರೆನಿಸಿಕೊಂಡ ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು ವಿಜಯಪುರ (ಬಿಜಾಪುರ)ವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ವಚನ ಸಾಹಿತ್ಯದಲ್ಲಿ ಕೃಷಿಗೈದು ಹುಲುಸಾದ ಬೆಳೆ ಬೆಳೆದರು. ಕಳೆ ತೆಗೆದರು ಅಳಿಯದೇ ಉಳಿದರು. ಅಂತೆಯೇ ಹಳಕಟ್ಟಿಯವರನ್ನು 'ವಿಜಾಪುರದ ಇನ್ನೊಂದು ಗುಮ್ಮಟ ಅದುವೇ ವಚನ ಗುಮ್ಮಟ' ಎಂದು ಕರೆದಿರುವುದು ಸಾರ್ಥಕವಾಗಿದೆ. ವಚನ ಸಾಹಿತ್ಯದ ಜೊತೆ ಜೊತೆಗೆ ಹಳಕಟ್ಟಿಯರು ಶಿಕ್ಷಣ, ಆರ್ಥಿಕ, ರಾಜಕೀಯ, ಸಾಮಾಜಿಕ, ಪತ್ರಿಕೋದ್ಯಮ ಹೀಗೆ ಹತ್ತು ಹಲವು ಕ್ಷೇತ್ರಗಳಿಗೆ ಸಾರ್ವಜನಿಕವಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಹೀಗಾಗಿ ಅಂದು ಕಟ್ಟಿ ಬೆಳಸಿದ ಸಂಘ ಸಂಸ್ಥೆಗಳು ಇಂದು ಹೆಮ್ಮರವಾಗಿ ಬೆಳೆದು ನಿಂತಿವೆ. ಈ ನಿಟ್ಟಿನಲ್ಲಿ 'ಶಿವಾನುಭವ ಪತ್ರಿಕೆಯಲ್ಲಿ ಸಾಮಾಜಿಕ ಕಳಕಳಿ'ಯ ಕುರಿತು ವಿವಿಧ ಪ್ರಮುಖ ಅಂಶಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

## ರಾಜಕೀಯ

ಸಮಕಾಲೀನ ರಾಜಕೀಯ ಸಮಸ್ಯೆಗಳಲ್ಲಿ ಒಂದಾದ ಹಾಗೂ ಆ ಕಾಲಘಟ್ಟದ ಪರಿಸರಕ್ಕೆ ಸಂಬಂಧಿಸಿದಂತೆ ಡಾ. ಫ ಗು ಹಳಕಟ್ಟಿಯವರು ಅಂದಿನ ಭಾರತ ಸರಕಾರದ ಆಡಳಿತ ಧೋರಣೆಗಳನ್ನು ಕುರಿತು ಬಹಳ ಕಟುವಾಗಿ ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಅಲ್ಲದೆ ಜನರು ಮತ್ತು ಪತ್ರಿಕೋದ್ಯಮದವರು ಆಡಳಿತಾರೂಢ ಈ ಧೋರಣೆಗಳನ್ನು ಖಂಡಿಸದೇ ಬಣ್ಣಿಸುತ್ತಾ ನಡೆದಿವೆ. ಎಂದು ಟೀಕಿಸಿದ್ದಾರೆ.

**ಸುರೇಶ ಪಿ ನಡೋಣಿ :** ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಮಾರ್ಗದರ್ಶಕರು : ಡಾ. ಶೋಭಾ ನಾಯಕ,** ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ

S.T.C. Arts and Commerce College BANHATTI 587 311

ಶಾಸನ ಸಭೆಗಳಲ್ಲಿ ಜನರು ಪ್ರತಿನಿಧಿಗಳು ಆಡಳಿತೆಯ ಲೋಪದೋಷಗಳನ್ನು ...ಕೊಂಡು ತಮ್ಮ ವಿಚಾರಗಳನ್ನು ಬಹಿರಂಗವಾಗಿ ಜನತೆಯ ಮುಂದೆ ಇಡುವುದಿಲ್ಲ. ಇದರಲ್ಲಿ ಅವರು ಭಯ ಪಡುತ್ತಲಿದ್ದಾರೆ! ವೃತ್ತಪತ್ರಿಕೆಗಳು ಇದ್ದುದ್ದನ್ನು ಹೊಗಳುತ್ತ ನಡೆದಿವೆ. ಈ ತರಹದ ಮನೋವೃತ್ತಿಯು ಭಾರತ ದೇಶದಲ್ಲಿ ಪಸರಿಸಹತ್ತಿದೆ. ಇದರ ಅಂತ್ಯ ಪರಿಣಾಮವೇನೆಂಬುವುದು ತಿಳಿಯದಾಗಿದೆ"[೧] ಡಾ. ಫ ಗು ಹಳಕಟ್ಟಿಯವರ ಈ ಬರವಣಿಗೆಯನ್ನು ನೋಡಿದರೆ ಆರೋಗ್ಯಕರವಾದ ಸಮಾಜವನ್ನು ಕಟ್ಟುವ ಸಾಮಾಜಿಕ ಕಳಕಳಿ ಎಂತಹದ್ದು ಎಂಬುವುದು ತಿಳಿಯುತ್ತದೆ. ಮುಂದುವರಿದು ಹಳಕಟ್ಟಿಯವರು ಅಂದಿನ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ಅವರನ್ನು ಕುರಿತು ವ್ಯಕ್ತಪಡಿಸಿದ ಮಾತುಗಳು ತುಂಬ ಗಮನಾರ್ಹವಾಗಿವೆ. "ಪಂ ಜವಾಹರಲಾಲರು ಸಮಾಜವನ್ನು ಪುರಸ್ಕರಿಸಹತ್ತಿದ್ದಾರೆ. ಅವರು ಗೊಂದಲದಲ್ಲಿ ಬೀಳುವಂತೆ ತೋರುತ್ತದೆ. ಅವರಿಗೆ ಹಳ್ಳಿಗಳ ಮತ್ತು ಸಮಾಜದ ಪರಿಸ್ಥಿತಿಯ ಅರಿಕೆಯು ಇರುವುದಿಲ್ಲ. ಅವರು ಅಂತರರಾಷ್ಟ್ರೀಯ ವಿಚಾರಗಳನ್ನು ಹೇಳುತ್ತಾ ಆಕಾಶದಲ್ಲಿ ಭ್ರಮಿಸುತ್ತಲಿದ್ದಾರೆ. ಕೆಳಗಿನ ಕೊಳಚೆಯು ಅವರಿಗೆ ಗೊತ್ತು ಇಲ್ಲ. ಈ ಕೊಳಚೆಯು ಹೋದ ಏಳು ವರ್ಷಗಳಲ್ಲಿ ಹೆಚ್ಚೆಚ್ಚು ಬೆಳೆಯುತ್ತಾ ಬಂದಿದೆ. ಮೇಲಾಧಿಕಾರಿಗಳು ಅಂದರೆ ಮಾಮಲೇದಾರರು, ಕಲೇಕ್ಟರ್ರು, ಪೊಲೀಸ್ ಈ ಉಚ್ಚ ಅಧಿಕಾರಿಗಳಿಗೆ ಈ ಕೊಳಚೆಯ ಸ್ಥಿತಿಯು ಪೂರ್ಣ ಗೊತ್ತಿದೆ. ಆದರೆ ಆಡಳಿತಗಾರರಿಗೆ ಸ್ಪಷ್ಟವಾಗಿ ಹೇಳುವಂತಹ ಪರಿಸ್ಥಿತಿಯು ಅವರಿಗಿಲ್ಲ. ಶಾಸನ ಸಭಾದವರು ಆಡಳಿತೆದಾರರ ಕಣ್ಣ ಮೇಲೆ ಮಣ್ಣು ಎರಚುವುದರಲ್ಲಿ ತೊಡಗಿದ್ದಾರೆ. ನಿಜಸ್ಥಿತಿಯನ್ನು ತಾವು ಹೊರಗೆಡವಿದರೆ ಚುನಾವಣಾ ಕಾಲಕ್ಕೆ ಪಾರ್ಲೆಮೆಂಟರಿ ಬೋರ್ಡಿನವರು ತಮ್ಮನ್ನು ಎಲ್ಲಿ ಬಿಟ್ಟು ಬಿಡುವರೋ ಎಂಬ ದೊಡ್ಡ ಭೀತಿಯು ಅವರಲ್ಲಿದೆ. ಒಟ್ಟಿಗೆ ನಾಡಿಗೆ ಏನು ಬೇಕು? ಎಂಬುದನ್ನು ನಿರ್ಭೀತಿಯಿಂದ ಹೇಳುವ ಪರಿಸ್ಥಿತಿಯು ದೇಶದಲ್ಲಿ ಹೊರಟು ಹೋಗಿದೆ."[೨] ಎಂದು ಆ ಕಾಲಘಟ್ಟದ ಜನರ ಹಾಗೂ ರಾಜ್ಯ ರಾಜಕಾರಣ, ರಾಜಕಾರಣಿಗಳ, ಜನರ ನಡೆಯನ್ನು, ಅಧಿಕಾರಿಗಳ ನಿರ್ಲಕ್ಷ ಮನೋಭಾವನೆಯನ್ನು ಪತ್ರಿಕೆಯ ಮೂಲಕ ವ್ಯಕ್ತಪಡಿಸಿದ್ದಾರೆ.

## ಆರ್ಥಿಕ

ಡಾ. ಫಕೀರಪ್ಪ ಹಳಕಟ್ಟಿಯವರು ನಮ್ಮ ನಾಡಿನ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಬೇಕಾದರೆ ಮೊದಲು ಸ್ತ್ರೀ ಪುರುಷರಿಗೆ ಯೋಗ್ಯವಾದ ಶಿಕ್ಷಣವನ್ನು ನೀಡಬೇಕು ಹಾಗೂ ಪ್ರಗತಿಪರವಾದ ಪರಸ್ಪರ ಸಾಂಸ್ಕೃತಿಕ ವಿಚಾರ ಸಂಕಿರಣಗಳು ನಡೆಯಬೇಕು ಅಲ್ಲದೆ ಈ ದೆಸೆಯಲ್ಲಿ ಹೊಸ ಹೊಸ ಶಾಸ್ತ್ರೀಯ ಸಂಶೋಧನೆಗಳು

Arts and Commerce College BANHATTI 587 311

ಜರುಗಬೇಕೇಂದು ಶಿವಾನುಭವ ಪತ್ರಿಕೆಯ ಮೂಲಕ ಪ್ರತಿಪಾದಿಸಿದರು. ಕೇವಲ ಬಾಯಿ ಮಾತಿಗೆ ಹೇಳದೆ ಹಳಕಟ್ಟಿಯವರು ವಚನಕಾರರಂತೆ ನುಡಿದಂತೆ ನಡೆದು ತೋರಿಸಿದರು. ಏಪ್ರಿಲ್ ೧೯೧೨ ರಲ್ಲಿ 'ದಿ ಬಿಜಾಪುರ ಸಿದ್ಧೇಶ್ವರ ಸಹಕಾರಿ ಪತ್ತಿನ ಸಂಘ'ವನ್ನು ಸ್ಥಾಪಿಸಿದರು. ಅಲ್ಲದೆ ಸಮಾಜದ ಏಳಿಗೆಗಾಗಿ ಒಕ್ಕಲಿಗರ ಕ್ಷೇಮಾಭಿವೃದ್ಧಿಗಾಗಿ ಹಾಗೂ ಬಿಜಾಪುರ ಜಿಲ್ಲೆಯ ಅಭಿವೃದ್ಧಿಗಾಗಿ ಡಾ. ಫ ಗು ಹಳಕಟ್ಟಿಯವರು ಒಕ್ಕಲುತನ ಸಹಕಾರಿ ಸಂಘವನ್ನು ಕೂಡ ಸ್ಥಾಪಿಸಿದರು. ಇಂದು ಅದು ಬಿಜಾಪುರ ಜಿಲ್ಲೆಯಲ್ಲಿ ೯ ಶಾಖೆಗಳನ್ನು ಹೊಂದಿ ರಾಜ್ಯದ ಪ್ರತಿಷ್ಠಿತ ಕೆಲವೇ ಸಹಕಾರಿ ಬ್ಯಾಂಕುಗಳಲ್ಲಿ ಇಂದು ಒಂದಾಗಿದೆ ಎಂದು ಹೇಳಬಹುದು.

**ಜ್ಯಾತ್ಯಾತೀತ**

ಭಾರತ ಜ್ಯಾತ್ಯಾತೀತ ರಾಷ್ಟ್ರವಾಗಲು ಇರುವ ಪ್ರಸ್ತುತ ಸವಾಲುಗಳೇನು, ಪರಿಹಾರೋಪಾಯಗಳು ಯಾವವು ಎಂಬುವುದನ್ನು ಮನಗಂಡು ಡಾ. ಹಳಕಟ್ಟಿಯವರು ತಮ್ಮ ಶಿವಾನುಭವ ಪತ್ರಿಕೆಯಲ್ಲಿ 'ಸ್ಫುಟ ವಿಷಯಗಳು' ಎಂಬ ತಲೆಬರಹದಡಿಯಲ್ಲಿ ಬಹಳ ಮೌಲಿಕವಾದ ವಿಚಾರಧಾರೆಗಳನ್ನು ವ್ಯಕ್ತಪಡಿಸಿದ್ದಾರೆ. ನವರಾಷ್ಟ್ರವಾಗಬೇಕಾದರೆ ಬೆಂಬಿಡದೆ ಕಾಡುತ್ತಿರುವ ಜಾತೀಯತೆ ಎಂಬ ಭೂತವನ್ನು ಹೊಡೆದೋಡಿಸಲೇಬೇಕು. ಅಂದಾಗ ಮಾತ್ರ ಸಾಮಾಜಿಕ ಸಮತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದುದರಿಂದ ಧಾರ್ಮಿಕ ಪ್ರವರ್ತಕರು ಜನರಲ್ಲಿ ಉದಾತ್ತವಾದ, ಉತ್ತಮವಾದ ಧಾರ್ಮಿಕ ಮೌಲ್ಯಗಳನ್ನು, ಭಾವನೆಗಳನ್ನು ಬೆಳೆಸುವುದರ ಮೂಲಕ ರಾಷ್ಟ್ರೀಯ ಏಕೀಕರಣವನ್ನು ಸಾಧಿಸಲು ಸಾಧ್ಯವೆಂದು 'ಜಾತಿಯತೆ' ಎಂಬ ಶೀರ್ಷಿಕೆಯಡಿಯಲ್ಲಿ ಹಳಕಟ್ಟಿಯವರು ಬಹಳ ಪ್ರಾಯೋಗಿಕವಾಗಿ ಪತ್ರಿಕೆಯಲ್ಲಿ ಬರೆದು ಜನರನ್ನು ಜಾಗೃತಗೊಳಿಸಿದರು. "ಧಾರ್ಮಿಕ ಜ್ಞಾನ ಪ್ರಸಾರದಿಂದ ಮನುಷ್ಯನಲ್ಲಿ ಉಚ್ಚ ಮನೋವೃತ್ತಿಯು ಉಂಟಾಗುತ್ತದೆ. ಇದು ಶಕ್ಯವೆಂಬುವುದು ಶಿವಶರಣರ ವಚನಗಳಿಂದ ಹಾಗೂ ಚರಿತ್ರೆಗಳಿಂದ ತಿಳಿದುಬರುತ್ತದೆ. ಆದರೆ ಈಗಿನ ರಾಜಕೀಯ ವಾತಾವರಣವು ಧರ್ಮಜ್ಞಾನ ಪ್ರಸಾರಕ್ಕೆ ಉತ್ತೇಜಕವಾಗಿರುವುದಿಲ್ಲ"[೩] ಎಂದು ಡಾ. ಫ ಗು ಹಳಕಟ್ಟಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶಿವಶರಣರ ತತ್ವಸಿದ್ಧಾಂತಗಳು ಚಾಚು ತಪ್ಪದೇ ಅನುಷ್ಠಾನಗೊಂಡರೆ ಭಾರತವೂ ಜಗತ್ತಿಗೆ ಮಾದರಿ ರಾಷ್ಟ್ರವಾಗಿ ನಿರ್ಮಾಣಗೊಳ್ಳುವಲ್ಲಿ ಸಂದೇಹವೇ ಇಲ್ಲ ಎಂಬ ಅವರ ಮಾತು ಎಂದಿಗೂ ಪ್ರಸ್ತುತವಾಗಿದೆ.

S.T.C. Arts and Commerce College BANHATTI 587 311



ಶೈಕ್ಷಣಿಕ

ಯಾವುದೇ ಒಂದು ರಾಷ್ಟ್ರ ಅಭಿವೃದ್ಧಿ ರಾಷ್ಟ್ರವಾಗಬೇಕಾದರೆ ಆ ರಾಷ್ಟ್ರವು ಶೈಕ್ಷಣಿಕವಾಗಿ ಸದೃಢವಾಗಿರಬೇಕೆಂಬ ಅಚಲವಾದ ನಿಲುವನ್ನು ಹೊಂದಿದ್ದ ಹಳಕಟ್ಟಿಯವರು ನಾಡಿನ ತುಂಬ ಹಲವಾರು ಶಿಕ್ಷಣ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಜನತಾ ಶಿಕ್ಷಣ ಸಂಘ ಬನಹಟ್ಟಿ, ಲಿಂಗಾಯತ ಶಿಕ್ಷಣ ಸಂಸ್ಥೆ ಬೆಳಗಾವಿ, ಧಾರವಾಡ, ಸೊಲ್ಲಾಪುರ, ಮುಂತಾದ ಕಡೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅದರ ಸದಸ್ಯರಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಕ್ರಿ.ಶ ೧೯೧೦ ರಲ್ಲಿ ವಿಜಾಪುರ(ವಿಜಯಪುರ)ದ ಲಿಂಗಾಯತ ಅಭಿವೃದ್ಧಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಮುಂದೆ ಇದು 'ಮಿಶನ್' ಎಂಬ ಪ್ರೌಢ ಶಾಲೆಯನ್ನು ೧೯೧೪ ರಲ್ಲಿ ತನ್ನ ವ್ಯಾಪ್ತಿಗೆ ಒಳಪಡಿಸಿಕೊಂಡಿತು. ಅಲ್ಲದೆ ೧೯೧೭ ರಲ್ಲಿ ಶ್ರೀ ಸಿದ್ಧೇಶ್ವರ ಮಾಧ್ಯಮಿಕ ಶಾಲೆಯಾಗಿ ಎಲ್ಲರಿಗೂ ವಿದ್ಯೆಯನ್ನು ನೀಡುವ ಮಾದರಿ ವಿದ್ಯಾಸಂಸ್ಥೆಯಾಗಿ ಬೆಳೆಯಿತು. ೧೯೩೩ ರಲ್ಲಿ ಸ್ಥಾಪಿತವಾದ ಬೆಳಗಾವಿಯ ಲಿಂಗರಾಜ ಕಾಲೇಜು ಮತ್ತು ೧೯೪೪ ರಲ್ಲಿ ಪ್ರಾರಂಭವಾದ ಬಾಗಲಕೋಟೆಯ ಬಸವೇಶ್ವರ ಕಾಲೇಜು -ಹೀಗೆ ಹತ್ತು ಹಲವು ಕಾಲೇಜುಗಳು ಸ್ಥಾಪನೆಗೊಳ್ಳಲು ಡಾ. ಹಳಕಟ್ಟಿಯವರ ಪಾತ್ರ ಬಹಳ ಪ್ರಮುಖವಾದುದಾಗಿದೆ. ಅವರು ಈ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅದೇ ರೀತಿ ೧೯೪೯ ರಿಂದ ೧೯೬೨ ರವರೆಗೆ ಈ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸಾಕಷ್ಟು ಪ್ರಮಾಣದಲ್ಲಿ ಸಂಸ್ಥೆ ಅಭಿವೃದ್ಧಿಹೊಂದಲು ಅವಿರತವಾಗಿ ಶ್ರಮಿಸಿದರು. ಅಲ್ಲದೆ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಮಾಡುವುದರ ಮೂಲಕ ಪ್ರತಿಷ್ಠಿತ ಸಂಸ್ಥೆಯನ್ನಾಗಿ ಮಾಡಿದರು. ಡಾ ಫ ಗು ಹಳಕಟ್ಟಿಯವರು ೧೯೫೪ ರಲ್ಲಿ ಹರ್ಡೇಕರ ಮಂಜಪ್ಪನವರ ಆಲಮಟ್ಟಿ ವಿದ್ಯಾಲಯದ ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿ ತಮ್ಮ ಹಿತಚಿಂತನೆಗಳಿಂದ ಸಂಸ್ಥೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಂತೆಯೇ ಡಾ. ಆರ್ ಸಿ ಹಿರೇಮಠರವರು ಹಳಕಟ್ಟಿಯವರನ್ನು 'ಶಿಕ್ಷಣ ತಜ್ಞ' ಎಂದು ಕರೆದಿರುವುದು ಸಾರ್ಥಕವಾಗಿದೆ. "ಧಾರವಾಡ, ಬಾಗಲಕೋಟ, ಬೆಳಗಾವಿ, ಹುಬ್ಬಳ್ಳಿ, ಬಳ್ಳಾರಿ, ಸೋಲ್ಲಾಪುರ, ಈ ಪಟ್ಟಣಗಳಲ್ಲಿ ಕಾಲೇಜುಗಳು ಆಗಿವೆ. ಬೇರೆ ಸ್ಥಳಗಳಲ್ಲಿ ಅವು ಆಗುವುದರಲ್ಲಿವೆ. ಇವುಗಳ ಸಲುವಾಗಿ ಒಂದು ಕೋಟಿ ರೂಪಾಯಿಗಳನ್ನು ವೀರಶೈವ ಸಮಾಜವು ಕೊಟ್ಟಿರುತ್ತದೆ... ಮುಂಬಯಿ ಅಹಮ್ಮದಾಬಾದ ಸೂರತ -ಇಲ್ಲಿ ಉಪಯುಕ್ತ ಔದ್ಯೋಗಿಕ ಉಚ್ಚಮಟ್ಟದ

S.T.C. Arts and Commerce College BANHATTI 587 311

ಕಾಲೇಜುಗಳಾಗಿವೆ. ಅವುಗಳ ಮಾದರಿಯ ಮೇಲೆ ನಮ್ಮ ಕಾಲೇಜುಗಳನ್ನು ಮುಂದುವರಿಸುವುದು ಅನಿವಾರ್ಯವಾಗಿದೆ"[೪] ಎಂದು ಹಳಕಟ್ಟಿಯವರು ಶಿಕ್ಷಣದ ಗುಣಮಟ್ಟ ಹಾಗೂ ಶಿಕ್ಷಣದ ಮಾದರಿಯನ್ನು ಕುರಿತು ತಮ್ಮ ಶಿವಾನುಭವ ಪತ್ರಿಕೆಯಲ್ಲಿ ಉಲ್ಲೇಖಿಸಿದ್ದಾರೆ.

**ಆಹಾರ ಪದ್ಧತಿ**

ಡಾ. ಫ ಗು ಹಳಕಟ್ಟಿಯವರು ಭಾರತದ ಪರಂಪರೆ, ಸಂಸ್ಕೃತಿ, ಆಚಾರ ವಿಚಾರಗಳ ಜೊತೆಗೆ ಆಹಾರ ಪದ್ಧತಿಯನ್ನು ಕುರಿತು ತಮ್ಮ ಶಿವಾನುಭವ ಪತ್ರಿಕೆಯಲ್ಲಿ ಬರೆದುಕೊಂಡಿದ್ದಾರೆ. ಮನುಷ್ಯರಿಗೆ ಮಾಂಸಾಹಾರ ಸೇವಿಸುವುದು ಅನಿವಾರ್ಯವಲ್ಲ ಅದರಿಂದ ಹೆಚ್ಚು ಬಲಿಷ್ಠರಾಗುತ್ತಾರೆಂಬುದು ತಪ್ಪು ಗ್ರಹಿಕೆಯಾಗಿದೆ. ನಮ್ಮ ಭಾರತೀಯ ಋಷಿ ಮುನಿಗಳ ಪರಂಪರೆಯನ್ನು ಅವಲೋಕಿಸಿದಾಗ ಗಡ್ಡೆ ಗೆಣಸು ತಿಂದ ಋಷಿ ಮುನಿಗಳು ಬೌದ್ಧಿಕವಾಗಿ, ಶಾರೀರಿಕವಾಗಿ ತುಂಬ ಬಲಿಷ್ಠರಾಗಿದ್ದರು. ಶಾಕಾಹಾರ ಆರೋಗ್ಯಕ್ಕೆ ಉತ್ತಮ ಎಂಬುವುದನ್ನು ಅನೇಕ ವಿದ್ವಾಂಸರು ಹಾಗೂ ಜರ್ಮನ್ ವೈದ್ಯರುಗಳಿಂದ ತಿಳಿಯಬಹುದಾಗಿದೆ. "ಪುರಾತನ ಕಾಲದಿಂದ ಶಾಕಾಹಾರಿಗಳಾಗಿದ್ದು ಭಾರತೀಯರು ಈಚೆಗೆ ಈ ಪದ್ಧತಿಯನ್ನು ಬಿಡುತ್ತಿರುವುದು ಖೇದಕರವೂ"[೫] ಆಗಿದೆ. ಭಾರತೀಯರು ಆಹಾರ ಪದ್ಧತಿಯ ಬದಲಾವಣೆಯು ಅನಿವಾರ್ಯವಲ್ಲದಿದ್ದರೂ ಮಾಂಸಾಹಾರಿಗಳಾಗುತ್ತಿರುವುದು ಖೇದಕರ ಸಂಗತಿಯಾಗಿದೆ ಎಂದಿದ್ದಾರೆ.

**ಸಾಮಾಜಿಕ**

ಹಳಕಟ್ಟಿಯವರು ಸಮಾಜವನ್ನು ಕುರಿತು "ಶಿವಶರಣರ ಕಾಯಕ, ಸಿದ್ಧಾಂತ, ಆರ್ಥಿಕ ನೀತಿ, ಸಮಾಜವಾದ ಇವುಗಳಿಗಿಂತ ಭಿನ್ನವಾಗಿದ್ದು ಉತ್ತಮ ಸಮಾಜ ನಿರ್ಮಾಣದಲ್ಲಿ ಶಿವಶರಣರ ಸಿದ್ಧಾಂತ ಶ್ರೇಷ್ಠವಾದದ್ದೆಂದು ಆಧಾರ ಸಹಿತ ವಿವರಿಸಿದ್ದಾರೆ".[೬] ಡಾ. ಫ ಗು ಹಳಕಟ್ಟಿಯವರು ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸುಧಾರಣಾ ಕಾರ್ಯಗಳ ಜೊತೆಗೆ ಸಾಮಾಜಿಕ ಸುಧಾರಣೆಗಳಿಗೆ ಹೆಚ್ಚಿನ ಮಹತ್ವ ನೀಡಿದರು. ಬರಗಾಲದ ಬರಪೀಡಿತ ಪ್ರದೇಶವಾಗಿದ್ದ ಬಿಜಾಪುರ(ವಿಜಯಪುರ)ಕ್ಕೆ ಕೆರೆ, ಕಟ್ಟೆ ಬಾವಿ, ಕಾಲುವೆಗಳನ್ನು ಕಟ್ಟಲು ಪತ್ರಿಕೆಯ ಮುಲಕ ಪ್ರೇರಕ ಶಕ್ತಿಯಾದರು. ಸರ್ ಎಂ ವಿಶ್ವೇಶ್ವರಯ್ಯನವರ ಸಲಹೆ ಸೂಚನೆಯಂತೆ ಭೂತನಾಳ ಕೆರೆಯ ನಿರ್ಮಾಣ ಮಾಡಿ ಬಿಜಾಪುರ ಭಾಗಕ್ಕೆ ಶಾಶ್ವತ ಕುಡಿಯುವ ನೀರಿನ ಸೌಕರ್ಯ ಒದಗಿಸಿಕೊಟ್ಟರು. "ಭೂಸುಧಾರಣೆಗಾಗಿ ಹೊಲಗಳಿಗೆ ಒಡ್ಡು

S.T.C. Arts and Commerce College BANHATTI 587 311



ಹಾಕಬೇಕೇಂಬ ವಿಚಾರ ಜನರಿಗೆ ತಿಳಿದಿರಲಿಲ್ಲ"[೭] ಭೂಸುಧಾರಣೆ ಹಾಗೂ ಭೂ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಮಹತ್ವ ನೀಡಿ ಭೂ ಸವಕಳಿಯನ್ನು ತಡೆಯಲು ದೊಡ್ಡ ದೊಡ್ಡ ಒಡ್ಡುಗಳನ್ನು ಹಾಕಿಸಿದರು. ಮಳೆ ನೀರು ಸಂಗ್ರಹಿಸಲು ಅಲ್ಲಲ್ಲಿ ಗುಂಡಿಗಳನ್ನು ತೋಡಿಸಿದರು. ೧೯೨೫ ರಲ್ಲಿ ಬರಗಾಲ ನಿರ್ವಹಣಾ ಸಂಸ್ಥೆಯಾದ 'ದಿ ವಿಲ್ಸನ್ ಆ್ಯಂಟಿ ಫ್ಯಾಮಿನ್ ಇನ್‌ಸ್ಟಿಟ್ಯೂಟ್' ಸ್ಥಾಪಿಸಿದರು. ಇದರ ಮೂಲಕ ಬರಗಾಲವನ್ನು ತಡೆಯುವ ಮೂಲ ಕಾರ್ಯಗಳನ್ನು ಕೈಗೊಂಡು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದರು.

'ಶೆಫರ್ಡ್' ಎಂಬ ಬ್ರಿಟಿಷ್ ಅಧಿಕಾರಿಯ ಹೆಸರಿನಲ್ಲಿ ಹಳಕಟ್ಟಿಯವರು ಬಿಜಾಪುರ ನಗರದ ಹೃದಯಭಾಗದಲ್ಲಿರುವ ಶ್ರೀ ಸಿದ್ಧರಾಮೇಶ್ವರ ದೇವಸ್ಥಾನದ ಆವರಣದಲ್ಲಿ ಒಂದು ಭವ್ಯವಾದ ಸುಂದರವಾದ 'ಶೆಫರ್ಡ್ ಹಾಲ್' ಎಂಬ ಸಭಾಮಂದಿರವನ್ನು ನಿರ್ಮಿಸಿದರು. ಇಲ್ಲಿ ಇಂದಿಗೂ ಮದುವೆ ಮುಂಜಿ ಸಭೆ ಸಮಾರಂಭ ಮಂಗಲ ಕಾರ್ಯಗಳು ನಡೆಯುತ್ತವೆ. ಹಳಕಟ್ಟಿಯವರು ಶ್ರೀ ಸಿದ್ಧರಾಮೇಶ್ವರ ದೇವಸ್ಥಾನದ ಸಂಸ್ಥೆಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮುಗ್ಧ ಗ್ರಾಮೀಣ ಜನರ ಧಾರ್ಮಿಕ ಶ್ರದ್ಧೆ ಮತ್ತು ಭಕ್ತಿ ಭಾವನೆಗಳನ್ನು ಅರಿತುಕೊಂಡು ಸಿದ್ಧರಾಮೇಶ್ವರ ಜಾತ್ರೆಯನ್ನು ಸಾಂಸ್ಕೃತಿಕ ಹಬ್ಬವನ್ನಾಗಿ ಪರಿವರ್ತಿಸಿದರು. ಕೀರ್ತನೆ, ಉಪನ್ಯಾಸ, ಹಾಡುಗಳು, ಮೈಕಸರತ್ತಿನ ಆಟಗಳು, ಮುಂತಾದ ಸಾಂಸ್ಕೃತಿಕ ಕ್ರೀಡೆಗಳಿಗೆ ಬಹುಮಾನ ನೀಡುವುದರ ಮುಲಕ ಪ್ರೋತ್ಸಾಹ ನೀಡಿದರು. ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯ ರಕ್ಷಣೆಗೆ ಹಗಲಿರುಳು ಶ್ರಮಿಸಿದ ಡಾ. ಹಳಕಟ್ಟಿಯವರು ಶಿವಾನುಭವ ಪತ್ರಿಕೆಯ ಮೂಲಕ ನಾಡಿನ ಸಂಸ್ಕೃತಿ ಸ್ತ್ರೀಯರ ಸ್ಥಾನಮಾನ ಹಾಗೂ ವಚನ ಕಟ್ಟುಗಳ ಸಂಪಾದನೆಯ ಮೂಲಕ ಕನ್ನಡ ಭಾಷಾ ಸಾಹಿತ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದರು. "ಧಾರ್ಮಿಕ ಜ್ಞಾನ ಪ್ರಸಾರದಿಂದ ಮನುಷ್ಯನಲ್ಲಿ ಉಚ್ಚ ಮನೋವೃತ್ತಿಯು ಉಂಟಾಗುತ್ತದೆ"[೮] ಎಂದು ಬಲವಾಗಿ ನಂಬಿದ್ದ ಹಳಕಟ್ಟಿಯವರು ಧರ್ಮ ಧರ್ಮಕ್ಕಾಗಿಯೇ ಅಲ್ಲ; ಅದು ವ್ಯಕ್ತಿಯ, ಸಮಾಜದ ಉದ್ಧಾರಕ್ಕಾಗಿ ಎಂದು ಹೇಳಿ ಧರ್ಮ ಮತ್ತು ಸಮಾಜಗಳನ್ನು ಪುನರುಜ್ಜೀವನಗೊಳಿಸಬೇಕೆಂದು ಪ್ರತಿಪಾದಿಸಿದರು.

ಒಟ್ಟಾರೆಯಾಗಿ 'ಜಂಗಮ ವಿಶ್ವವಿದ್ಯಾಲಯದ ಸಚೇತನ' ಎನಿಸಿಕೊಂಡ ಡಾ. ಫ ಗು ಹಳಕಟ್ಟಿಯವರು ಶಿಕ್ಷಣ, ಸಂಘ ಸಂಸ್ಥೆಗಳ ಸಂಸ್ಥಾಪಕರಾಗಿ, ಸಂಪಾದಕರಾಗಿ ಶಿವಾನುಭವ ಪತ್ರಿಕೆಯ ಮೂಲಕ ಜನಪರ ಸಮಾಜಮುಖಿ ಕಾರ್ಯಗಳನ್ನು ಕೈಗೆತ್ತಿಕೊಂಡು ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ,

S.T.C. Arts and Commerce College BANHATTI 587 311

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಉದಾತ್ತ ಚಿಂತನೆಗಳ ಮೂಲಕ ಸಮಸ್ತ ನಾಡಿನ ಶ್ರೇಯೋಭಿವೃದ್ಧಿಗಾಗಿ ಹಗಲು ರಾತ್ರಿ ಎನ್ನದೆ ಶ್ರಮಿಸಿದರು. ಹಳಕಟ್ಟಿಯವರ ಕರ್ತವ್ಯ ನಿಷ್ಠೆ, ಸಾತ್ವಿಕ ಚಿಂತನೆಗಳು, ಕೃತಜ್ಞತಾ ಮನೋಭಾವ, ಅಂತಃಕರುಣೆ, ಸ್ಥಿತಪ್ರಜ್ಞೆ, ತ್ಯಾಗ ಮನೋಭಾವ, ಪ್ರಾಮಾಣಿಕತೆ, ತೇಪೆ ಕೋಟಿನ ಫಕೀರನೆನಿಸಿಕೊಂಡರೂ ಅಳಿಯದೇ ಉಳಿದ ಸೌಜನ್ಯ ಬತ್ತಲಾರದ ಉತ್ಸಾಹದ ಚಿಲುಮೆಯಂತಹ ಚೈತನ್ಯಗಳಿಂದ ನಮಗೆ ನಮ್ಮ ಮುಂದಿನ ಪೀಳಿಗೆಗೆ ಹಳಕಟ್ಟಿಯವರು ಇಂದು ಮುಂದು ಎಂದೆಂದಿಗೂ ಅಮರ ಅಜರಾಮರ.

## ಅಡಿಟಿಪ್ಪಣಿಗಳು

೧. ಸ್ಫುಟ ವಿಷಯಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೮, ಪು. ೩೮
೨. ಸ್ಫುಟ ವಿಷಯಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೮, ಪು. ೩೮೩
೩. ಸ್ಫುಟ ವಿಚಾರಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೪, ಪು. ೨೪೮–೪೯
೪. ಸ್ಫುಟ ವಿಷಯಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೧೦, ಪು. ೫೦೫
೫. ಸ್ಫುಟ ವಿಷಯಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೭, ಪು. ೩೪೫
೬. ಸ್ಫುಟ ವಿಷಯಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೬, ಪು. ೨೯೧
೭. ನನ್ನ ಎಪ್ಪತ್ತೈದು ವರ್ಷಗಳು = ವಚನ ಪಿತಾಮಹ ಹಳಕಟ್ಟಿಯವರ ಸ್ಮಾರಕ ಗ್ರಂಥ, ೧೯೬೮, ಪು. ೫
೮. ಸ್ಫುಟ ವಿಚಾರಗಳು : ಶಿವಾನುಭವ, ಸಂಪುಟ –೨೯, ಸಂಚಿಕೆ ೫, ಪು. ೨೪೯

## ಗ್ರಂಥ ಋಣ

೧. ಡಾ. ಹಳಕಟ್ಟಿ ಫಕೀರಪ್ಪನವರು ಎಸ್. ಆರ್. ಗುಂಜಾಳ, ಪ್ರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರು, ಬೆಳಗಾವಿ. ೧೯೮೮
೨. ಪತ್ರಕರ್ತರಾಗಿ ಡಾ. ಫ. ಗು. ಹಳಕಟ್ಟಿಯವರು, ಸುರೇಶ ಇಂಗಳಗಿ (ಅಪ್ರಕಟಿತ ಮಹಾಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨೦೦೬

(10)



S.T.C. Arts and Commerce College BANHATTI 587 311


೩. ಫ ಗು ಹಳಕಟ್ಟಿಯವರ ಪತ್ರಿಕಾ ಸಾಹಿತ್ಯ, ಡಾ. ಪಿ ಕೆ ರಾಠೋಡ, (ಅಪ್ರಕಟಿತ ಮಹಾಪ್ರಬಂಧ) ಕ. ವಿ. ವಿ. ಧಾರವಾಡ ೧೯೯೬

೪. ವಚನ ಗುಮ್ಮಟ, ಡಾ ಬಿ ಎಂ ಪಾಟೀಲ ಪ್ರ ಹಿತಚಿಂತಕ ಪ್ರಕಾಶನ, ಮಹಾಲಿಂಗಪುರ, ೨೦೦೬

೫. ಶಿವಾನುಭವ ಪತ್ರಿಕೆ, ಫ. ಗು. ಹಳಕಟ್ಟಿ ಮತ್ತು ಎಂ. ಎಂ ಕಲಬುರ್ಗಿ, ಪ್ರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರು, ಬೆಳಗಾವಿ. ೧೯೯೬

೬ ವಚನ ಗುಮ್ಮಟ, ಫ. ಗು. ಹಳಕಟ್ಟಿ, ಜಿ. ಎಸ್. ಸಿದ್ಧಲಿಂಗಯ್ಯ, ಪ್ರ ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತು, ಮೈಸೂರು, ೧೯೯೮


■■

Co-ordinator
IQAC
SSS STC Art's and Commerce College.
BANHATTI -587311. Dist. Bagalkote.

PRINCIPAL
STC Arts & Commerce College
BANHATTI ( Dist: Bagalkot)

10